ಅಧಿಕಾರ ಕೊಟ್ಟರು. ಹೋದ ಸಾರಿ ಪಂಚಾಯತ್‌ರಾಜ್ ಆಕ್ಟ್ ಪ್ರಕಾರ ಪಂಚಾಯತ್ ರಾಜ್ ತಾಲ್ಲೂಕು ಪಂಚಾಯಿತಿಯಲ್ಲಿ ಬೆನಿಫಿಷಿಯರೀಸ್ ಆಯ್ಕೆ ಮಾಡಬೇಕು. ಹೀಗಾಗಿ ಆಯ್ಕೆ ಮಾಡುವುದರಲ್ಲಿ ವಿಳಂಬವಾಯಿತು.

12.10 ಪಿ.ಎಂ.

ನಮ್ಮ ಪ್ರೋಗ್ರಾಮನ್ನು ನಾವು ಮೇ ತಿಂಗಳಲ್ಲಿ ಸರ್ವೆ ಮಾಡಿಸಿ ಅಕ್ಟೋಬರ್ ತಿಂಗಳಲ್ಲಿ ಲಾಂಚ್ ಮಾಡಿದ್ದೇವೆ. ಅಕ್ಟೋಬರ್ ತಿಂಗಳಲ್ಲಿ ಲಾಂಚ್ ಮಾಡಿದ ಮೇಲೆ ಬೆನಿಫಿಷಯರೀಸ್ ಸೆಲೆಕ್ಷನ್ ಆಯಿತು. ಈ ವರ್ಷ ಹೊಸ ಯೋಜನೆ ಮಾಡಿರುವುದರಿಂದ ಸ್ವಲ್ಪ ವಿಳಂಬವಾಗಿದೆ. ಮಳೆಗಾಲ ಬರುವುದರೊಳಗಾಗಿ ಸಂಪೂರ್ಣವಾಗಿ ಒಂದು ಲಕ್ಷ ಇಪ್ಪತ್ತಾರು ಸಾವಿರ ಮನೆಗಳನ್ನು ಈ ಸರ್ಕಾರ ಸಂಪೂರ್ಣಗೊಳಿಸುತ್ತದೆ, ಮತ್ತು ಸಂಪೂರ್ಣವಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆಂದು ತಮ್ಮ ಮುಖಾಂತರ ಸ್ಪಷ್ಟಪಡಿಸುತ್ತೇನೆ.

ಮೈಸೂರು ಮಹಾನಗರ ಪಾಲಿಕೆಯಲ್ಲಿ ಹಣಕಾಸಿನ ಮುಗ್ಗಟ್ಟು

104 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದು ವರ್ಷದಲ್ಲಿ ಮೈಸೂರು ಮಹಾನಗರಪಾಲಿಕೆಗೆ ಸರ್ಕಾರ ಬಿಡುಗಡೆ ಮಾಡಿರುವ ಹಣದ ವಿವರಗಳೊನ್ನೊದಗಿಸುವುದು?

ಆ) ಈ ಹಣವನ್ನು ನಗರ ಪಾಲಿಕೆಯು ಯಾವ ಯಾವ ಬಾಬ್ತು ಎಷ್ಟೆಷ್ಟು ಖರ್ಚು ಮಾಡಿದ ವಿವರಗಳನ್ನೊದಗಿಸುವುದು?

ಇ) ಮೈಸೂರು ನಗರ ಪಾಲಿಕೆಯಲ್ಲಿ ಹಣಕಾಸಿನ ಮುಗ್ಗಟ್ಟಿನಿಂದ ಅಭಿವೃದ್ಧಿ ಕಾರ್ಯಗಳು ಸಮರ್ಪಕ ರೀತಿಯಲ್ಲಿ ಆಗದೇ ಇರುವುದು ಸರ್ಕಾರಕ್ಕೆ ತಿಳಿದಿದೆಯೇ?

ಈ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳಾವುವು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್- ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ)		ರೂ. ಲಕ್ಷಗಳಲ್ಲಿ
1)	ಜಕಾತಿ ಅನುದಾನ	473.88
2)	ಮನರಂಜನಾ ತೆರಿಗೆ ಮತ್ತು ಸರಭಾರ್ಜಿದಿ	210.15
3)	(ವಾಣಿಜ್ಯ ತೆರಿಗೆ ಇಲಾಖೆ ಮೂಲಕ) ಆಸ್ತಿ ಮಾರಾಟ ತೆರಿಗೆಯಿಂದ ಬರುವ ಉತ್ಪತ್ತಿ (ಜಿಲ್ಲಾ ನೊಂದಣಾಧಿಕಾರಿಗಳ ಮೂಲಕ)	98.66
4)	ಮೋಟಾರು ವಾಹನ ತೆರಿಗೆಗಳಿಂದ ಬರುವ ಉತ್ಪತ್ತಿ	32.20
	ಒಟ್ಟು	**814.89**

ಅ)		ರೂ. ಲಕ್ಷಗಳಲ್ಲಿ
1)	ಸಾಮಾನ್ಯ ಆಡಳಿತ	177.93
2)	ಸಾರ್ವಜನಿಕ ರಕ್ಷಣೆ	80.00
3)	ಸಾರ್ವಜನಿಕೆ ಆರೋಗ್ಯ ಮತ್ತು ಸೌಕರ್ಯ	664.77
4)	ಲೋಕೋಪಯೋಗಿ ಕಾಮಗಾರಿಗಳು	845.64
5)	ವಂತಿಕೆ ಮತ್ತು ಸಹಾಯಾನುಧಾನ	1.22
6)	ಇತರೆ ಬಾಬ್ತುಗಳು	511.14
	ಒಟ್ಟು	**2280.70**

ಇ) ತಿಳಿದಿದೆ.

ಈ) ರಾಜ್ಯ ಸರ್ಕಾರವು ನೇಮಿಸಲಾಗಿದ್ದ ರಾಜ್ಯ ಹಣಕಾಸು ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ನೀಡಬೇಕಾದ ಪಾಲನ್ನು ನಿಗಧಿಪಡಿಸಲಾಗಿದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಅದರಲ್ಲಿ ತೆಗೆದುಕೊಳ್ಳುವ ನಿರ್ಣಯದ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ನಗರ ಒಂದಾನೊಂದು ಕಾಲದಲ್ಲಿ ಉದ್ಯಾನ ನಗರಿ ಎನ್ನತಕ್ಕಂಥ ಹೆಸರನ್ನು ಪಡೆದಿತ್ತು. ಆದರೆ ಇವೊತ್ತು ಅಲ್ಲಿನ ಪರಿಸ್ಥಿತಿ ಎಷ್ಟು ಹದಗೆಟ್ಟಿದೆ ಎಂದರೆ ಒಬ್ಬ ಗರ್ಭಿಣಿ ಹೆಂಗಸು ಹೆರಿಗೆಗೆಂದು ಆಸ್ಪತ್ರೆತೆ ಹೋಗಿದ್ದಳು. ಆದರೆ ಅಲ್ಲಿನ ಡಾಕ್ಟರರು ಹೇಳಿದರಂತೆ ಇಲ್ಲಿ ಅಪರೇಷನ್ ಮಾಡಿದರೆ 12 ಸಾವಿರ ರೂಪಾಯಿ ಖರ್ಚಾಗುತ್ತದೆ, ಕುವೆಂಪು ನಗರದಿಂದ ನಜರಬಾದಗೆ ಆಟೋದಲ್ಲಿ ಹೊರಟುಹೋಗಿ ಏಕೆಂದರೆ ಸಿಸೇರಿನ್ ಅಪರೇಷನ್ ಮಾಡಬೇಕಾಗುತ್ತದೆ, ಬೇಗ ಆಗಿ ಹೋಗುತ್ತದೆ ಬೇಗ ಹೋಗಿ ಎಂದು ಹೇಳಿದರಂತೆ. ಆ ರೀತಿ ಇವೊತ್ತು ಮೈಸೂರು ನಗರದ ರಸ್ತೆಗಳಾಗಿವೆ. ನಮ್ಮ ರಾಜ್ಯದ ಮೈಸೂರು ನಗರದಲ್ಲಿ ಮೂರು ಜನ ಬಿ.ಜೆ.ಪಿ ಶಾಸಕರಿದ್ದಾರೆಂದು ಹೇಳಿ ನನಗೆ ಯಾವುದೇ ವಿಧವಾದ ಅಸ್ಪದವನ್ನು ಕೊಡದೇ ನಮ್ಮಮೇಲೆ ಮಲತಾಯಿ ಧೋರಣೆ ಮಾಡತಕ್ಕಂಥ ಕೆಲಸವನ್ನು ಕೂಡ ಮಾಡುತ್ತಿದ್ದಾರೆ. ಅಲ್ಲಿನ ಅಧಿಕಾರಿಗಳನ್ನು ಹೋಗಿ ಕೇಳಿದರೆ ಈ ರಸ್ತೆ ಉಳಿ ಬಿದ್ದಿದೆ ಎಂದು ಹೇಳುತ್ತಾರೆ. ಈ ರೀತಿ ಅವ್ಯವಸ್ಥೆ ಆಗ್ರವಾಗಿರತಕ್ಕಂಥ ಮೈಸೂರು ನಗರವನ್ನು ಯಾವಾಗ ಸರಿಪಡಿಸುತ್ತೀರಿ ದಯಮಾಡಿ ತಿಳಿಸುತ್ತೀರೋ?

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಈಗಾಗಲೇ ಹಣಕಾಸು ಆಯೋಗವನ್ನು ರಚನೆ ಮಾಡಿದ್ದು ಅದರ ವರದಿ ಕೂಡ ಬಂದಿದೆ. ಮೈಸೂರಿನದಷ್ಟೆ ಆರ್ಥಿಕ ಪರಿಸ್ಥಿತಿ ಹದಗೆಟ್ಟಿಲ್ಲ, ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ಪರಿಸ್ಥಿತಿ ಹದಗೆಟ್ಟಿದೆ. ಆ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಗೋಸ್ಕರ ಈ ಹಣಕಾಸು ಆಯೋಗದ ರಚನೆಯಾಗಿದೆ. ಅದರ ವರದಿ

ಕೂಡ ಬಂದಿದೆ. ಅದು ಬಂದ ನಂತರ ಎಲ್ಲಾ ನಗರಸಭೆಗಳಿಗೆ ಹಣವನ್ನು ಒದಗಿಸಬಹುದು ಮತ್ತು ನಮ್ಮ ಸರ್ಕಾರ ಇತ್ತೀಚೆಗೆ 28 ಕೋಟಿ ರೂಪಾಯಿಯನ್ನು ಎಲ್ಲಾ ನಗರ ಸಭೆಗಳಿಗೆ ಮತ್ತು ಮಹಾನಗರ ಪಾಲಿಕೆಗೆ ಒದಗಿಸಿದೆ. ಹಾಗೂ ಅನೇಕ ಕಡೆ ಕೆಲಸ ಕೂಡ ನಡೆದಿದೆ. ನಮ್ಮ ಸರ್ಕಾರದಿಂದ ಎಷ್ಟು ಹಣಕಾಸನ್ನು ಒದಗಿಸಿದರೆ ಅಷ್ಟು ಹಣವನ್ನು ನಗರಸಭೆಗಳಿಗೆ ಹಾಗೂ ಮಹಾನಗರಪಾಲಿಕೆಗಳಿಗೆ ಹಿಂದೆ ಎಂದೂ ಕೊಟ್ಟಿಲ್ಲ. ಮುಂದೆ ಕೂಡ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸಲು ರೆಕಮಂಡೇಶನ್ ಬಗ್ಗೆ ಚರ್ಚೆ ನಡೆದಿದೆ ಅದರ ನಂತರ ಹೆಚ್ಚಿನ ಹಣವನ್ನು ಒದಗಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಎ. ರಾಮದಾಸ್ : ನಾವು ಸರ್ಕಾರದಿಂದ ಸಹಾಯಧನವನ್ನು ಕೇಳುತ್ತಿಲ್ಲ. ಸರ್ಕಾರದಿಂದ ಮೈಸೂರು ಮಹಾನಗರಪಾಲಿಕೆಗೆ ಇನ್ನು ಎರಡೂವರೆ ಕೋಟಿ ಬರಬೇಕಾದ ಬಾಕಿ ಇದೆ. ಸರ್ಕಾರದಲ್ಲಿ ಹಣ ಇದೆ ಎಂದು ನಮ್ಮ ಜಿಲ್ಲಾ ಮಂತ್ರಿಗಳು ಹೇಳಿದ್ದಾರೆ. ಆದರೆ ಇದುವರೆಗೆ ಹಣ ಬಿಡುಗಡೆ ಆಗಿಲ್ಲ. ಅದಕ್ಕೆ ಏನು ಕಾರಣ? ಮತ್ತೆ ಆರ್ಥಿಕ ಪರಿಸ್ಥಿತಿ ತುಂಬಾ ಕಷ್ಟ ಇದೆ ಎಂದು ಒಂದುಕಡೆ ಒಪ್ಪಿಕೊಂಡಿದ್ದೀರಿ. ಆರ್ಥಿಕ ಪರಿಸ್ಥಿತಿ ಕಷ್ಟ ಇದೆ ಎಂದು ಒಪ್ಪಿಕೊಂಡಾಗಲೂ ಕೂಡ ಬಾಕಿ ಇರುವ ಹಣವನ್ನು ಏತಕ್ಕಾಗಿ ಬಿಡುಗಡೆ ಮಾಡಲಿಲ್ಲ?

ಶ್ರೀ ವೈಜನಾಥ್ ಪಾಟೀಲ್ : ಎಲ್ಲಾ ಮಹಾನಗರ ಪಾಲಿಕೆಗಳಿಗೆ ಎಷ್ಟು ಕೊಡುವುದಿತ್ತು ಅಷ್ಟನ್ನು ಕೊಡುತ್ತಿದ್ದೇನೆ. ಮಾನ್ಯ ಸದಸ್ಯರು ಹೇಳಿದ ಎರಡೂವರೆ ಕೋಟಿಯ ಬಗ್ಗೆ ನಾನು ಪರಿಶೀಲನೆ ಮಾಡಿ ಬಿಡುಗಡೆ ಮಾಡುತ್ತೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಹಣಕಾಸು ಆಯೋಗವು ತನ್ನವರಗಿಯನ್ನು ಸಲ್ಲಿಸಿದೆ ಎನ್ನತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಹಾಗೂ ಅದು ಸರ್ಕಾರದ ಪರಿಶೀಲನೆಯಲ್ಲಿ ಇದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಗರ ಮಟ್ಟದಲ್ಲಿ ರಸ್ತೆಗಳು ಸರಿ ಇಲ್ಲದಿದ್ದರೆ ಜನ ಹೇಗೆ ಜೀವನ ಮಾಡುತ್ತಾರೆ, ನಾವು ಹೇಗೆ ಇರಲಿಕ್ಕೆ ಸಾಧ್ಯ ಎನ್ನತಕ್ಕಂಥ ಪ್ರಶ್ನೆ ಅವರು ತಿಳಿದುಕೊಂಡಿದ್ದರೆ ಪರಿಶೀಲನೆಯಲ್ಲಿದೆ ಎನ್ನತಕ್ಕಂಥದ್ದನ್ನು ಹೇಳುವ ಬದಲು ತಕ್ಷಣದಲ್ಲಿ ಇದಕ್ಕೆ ಪರಿಹಾರ ಕಂಡು ಹಿಡಿದು, ತಕ್ಷಣ ನಗರ ಪಾಲಿಕೆಗೆ ಸಲ್ಲಿಸತಕ್ಕಂಥ ಹಣವನ್ನು ಸಲ್ಲಿಸತಕ್ಕಂಥ ಒಂದು ವ್ಯವಸ್ಥೆಯಾಗುತ್ತಿತ್ತು. ಅದನ್ನು ಅವರು ಮಾಡಲಿಲ್ಲ. ಮೂರು ತಿಂಗಳ ಹಿಂದೆ ನಗರಪಾಲಿಕೆಯಲ್ಲಿ ಸಂಬಳಕ್ಕಾಗಿ ಹಣ ಇಲ್ಲದೇ ಬೇರೆ ಕಡೆಯಿಂದ 10 ಲಕ್ಷ ರೂಪಾಯಿಗಳನ್ನು ತಂದು ಸಂಬಳ ಕೊಡುವಂಥ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ತಕ್ಷಣ ಪರಿಶೀಲಿಸುತ್ತೇವೆ, ಶೀಘ್ರದಲ್ಲಿ ಪರಿಹಾರ ಒದಗಿಸುತ್ತೇವೆ ಎನ್ನುವುದರ ಬದಲಾಗಿ ತಕ್ಷಣ ಇದರ ಬಗ್ಗೆ ಕೆಲಸ ಮಾಡಿದರೆ ನಗರಪಾಲಿಕೆ ಅಭಿವೃದ್ಧಿ ಮತ್ತು ನಗರದ ವ್ಯವಸ್ಥೆಗೆ ಅನುಕೂಲವಾಗಲಿಕ್ಕೆ ಕಾರಣರಾಗುತ್ತಿರೋ ಎನ್ನುವ ಒಂದು ಮನವಿಯನ್ನು ನಾನು ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೇ, ಮೈಸೂರು ನಗರಕ್ಕೆ ಸರ್ಕಾರ ಒಂದು ಅಧಿಕಾರಿಗಳ ನಿಯೋಗ ಕಳುಹಿಸಿಕೊಡಲಿ. ಆ ಮೈಸೂರು ನಗರದಲ್ಲಿರತಕ್ಕಂಥ ಗಾರ್ಬೇಜ್, ಕಸಕಡ್ಡಿಗಳ ರಾಶಿ, ಅಲ್ಲಿ ಕೊಳೆತು ನಾರತಕ್ಕಂಥ ಒಳಚರಂಡಿ ಇವೆಲ್ಲವನ್ನು ಪರಿಶೀಲನೆ ಮಾಡಿ,

ಆದ್ಯತೆಯ ಮೇಲೆ ನೀವು ಹಣವನ್ನು ಬಿಡುಗಡೆ ಮಾಡಿ, ಮೈಸೂರು ನಗರವನ್ನು ಸುವ್ಯವಸ್ಥೆ ಸ್ಥಿತಿಗೆ ತಾವೇನಾದರೂ ತರದೆಹೋದರೆ ಇಲ್ಲಿ ಧರಣಿ ಉಪವಾಸ ಸತ್ಯಾಗ್ರಹ ಮಾಡುವುದು ಅನಿವಾರ್ಯವಾಗುತ್ತದೆ. ನಮಗೆ ಜನರು ಛೀಮಾರಿ ಹಾಕುತ್ತಿದ್ದಾರೆ. ಮೂರು ಜನ ಬಿ.ಜೆ.ಪಿ.ಯವರು ಗೆದ್ದುಬಿಟ್ಟಿವಲ್ಲಾ ಎಂದು ಹೊಟ್ಟೆಕಿಚ್ಚು ಪಡತಕ್ಕಂಥ ಉಸ್ತುವಾರಿ ಮಂತ್ರಿಗಳಿಂದ ನಾವೆಲ್ಲಾ ಕಂಗೆಟ್ಟುಹೋಗಿದ್ದೇವೆ. ಅವರಿಗೆ ಏನು ಕೇಳಿದರೂ ದುಡ್ಡು ಇಲ್ಲ, ದುಡ್ಡು ಇಲ್ಲ, ಅಧಿಕಾರಿಗಳೂ ದುಡ್ಡಿಲ್ಲ, ದುಡ್ಡಿಲ್ಲ ಹೇಳುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ : ಮೈಸೂರು ಸಿಟಿ ಬಗ್ಗೆ ಮಾತನಾಡಬೇಕಾದರೆ, ತಮಗೆ ಗೊತ್ತಿರಬಹುದು ಕಾರ್ಪೋರೇಷನ್‌ನಲ್ಲಿ ಜನ ನಮ್ಮ ಪರವಾಗಿ ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನಾವೂ 25 ಗೆದ್ದಿದ್ದೇವೆ. ನಾವು 3 ರಿಂದ 21ಕ್ಕೆ ಹೋಗಿದ್ದೇವೆ. ನೀವು ಹಣ ಕೊಟ್ಟು, ಕಳ್ಳ ಓಟು ಮಾಡಿಸಿ ನೀವು ಕಾರ್ಪೋರೇಷನಗೆ ಬಂದಿದ್ದೀರಿ. ಆದರೆ ನಾವು ಸ್ವಂತವಾಗಿ, ಪ್ರಾಮಾಣಿಕವಾಗಿ, ಗೆದ್ದಿದ್ದೇವೆ, ಮತದಾರ ಪ್ರಭುಗಳಿದ್ದಾರೆ. ಮತಗಳನ್ನು ಪಡೆದು 21 ಸೀಟುಗಳನ್ನು ನಗರಪಾಲಿಕೆಯಲ್ಲಿ ಗೆದ್ದಿದ್ದೇವೆ.

SRI R.V. DESHPANDE : If you have any grievance, make a complaint to the Election Commission. ನೀವೆಲ್ಲಾ ಎಜನ್ಸಿ ಮೂಲಕ ಪತ್ತೆ ಮಾಡಿ. Sir, that allegation should not go on record.

ಶ್ರೀ ಜೆ.ಹೆಚ್. ಪಟೀಲ್ : ಮಾನ್ಯ ಶಂಕರಲಿಂಗೇಗೌಡರಿಗೆ ಗೊತ್ತಿರಬೇಕು. ಅವರು ಮೈಸೂರಿನಲ್ಲಿ ಗೆಲ್ಲಲು ಕಾರಣವೇನೆಂದರೆ ಹಿಂದಿನವರು ಸರಿಯಾಗಿ ಕೆಲಸ ಮಾಡಲಿಲ್ಲವೆಂದು ನೀವು ಗೆದ್ದಿರಿ. ನಮ್ಮ ಹಾಗೆ ಕೆಲಸ ಮಾಡಿದರೆ ನೀವೆಲ್ಲಿ ಗೆಲ್ಲುತ್ತಿದ್ದಿರಿ?

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಜೆ.ಹೆಚ್. ಪಟೀಲರೇ ಚಿನ್ನಗಿರಿಯಲ್ಲೂ ತಾವು ಗೆದ್ದಿದ್ದು ಇದೇ ರೀತಿ. ದಯವಿಟ್ಟು ನೆನಪಿಟ್ಟುಕೊಳ್ಳಿ. ಶಿವಮೊಗ್ಗ ಜಿಲ್ಲೆ ನೀವು ಮರೆತು ಬಿಟ್ಟಿದ್ದೀರಿ. ಹಾಲಪ್ಪನವರು ಪಾಪ ಯಜಮಾನರು ಅವರ ಕೈಯಲ್ಲಾಗಲಿಲ್ಲ, ಅವರ ಕೈಯಲ್ಲಿ ಕೆಲಸ ಮಾಡಲಿಕ್ಕಾಗಲಿಲ್ಲ. ಆಕಸ್ಮಾತ್ ತಾವು ಗೆದ್ದರೂ ತಮ್ಮ ವಿರುದ್ಧವಾಗಿ ಸೋತವರೂ ಕೂಡ ಬಹಳ ಕಮ್ಮಿಯಲ್ಲಿ ಸೋತಿದ್ದಾರೆ.

ಶ್ರೀ ಜೆ.ಹೆಚ್. ಪಟೀಲ್ : ಮುನಿಸಿಪಾಲಿಟಿ ಏನಾಯಿತು?

ಶ್ರೀ ಕೆ.ಎಸ್. ಈಶ್ವರಪ್ಪ : ಅಧಿಕಾರದ ದುರುಪಯೋಗ, ಬೇರೆ ಬೇರೆ ಮತದಾರರನ್ನು ಕರೆದುಕೊಂಡು ಬಂದು ಓಟ್ ಮಾಡಿಸುವುದು. ಸಾರಾಯಿ, ಎಲ್ಲಾ ಮಾಡಿ ತಾವು ಚುನಾವಣೆಯಲ್ಲಿ ಗೆದ್ದಿದ್ದಾರೆ.

(ಗೊಂದಲ)

ಅಧ್ಯಕ್ಷರು : ಈಶ್ವರಪ್ಪನವರೇ, ನೀವೂ ಗೆದ್ದಿದ್ದೀರಿ. ಅವರೂ ಗೆದ್ದಿದ್ದಾರೆ. ನಾನು ಸೋತು ಹೋಗುತ್ತಿದ್ದೇನೆ ಇಲ್ಲಿ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ನಿಮ್ಮ ಅಧಿಕಾರದ ಸಂಪೂರ್ಣ ಉಪಯೋಗ ಮಾಡಿಕೊಂಡಿದ್ದೀರಿ. ಆಡಳಿತ ಯಂತ್ರದ ಸಂಪೂರ್ಣ ದುರುಪಯೋಗ ಮಾಡಿಕೊಂಡಿದ್ದೀರಿ. ಅದರಲ್ಲಿ ಅನುಮಾನವಿಲ್ಲ. ನಿಮಗೆ ಮೌಲ್ಯ ಇಲ್ಲ. ಬರೀ ಮುಖವಾಡ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಹಣ ಬಿಡುಗಡೆ ಯಾವಾಗ ಮಾಡುತ್ತೀರೆಂದು ಹೇಳಬೇಕು.

ಅಧ್ಯಕ್ಷರು : ಶಂಕರಲಿಂಗೇಗೌಡರು ಅಷ್ಟೆಲ್ಲಾ ಹೇಳಿದ್ದಾರೆ. ಆ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡುತ್ತೇವೆಂದು ಹೇಳಿ.

ಶ್ರೀ ವೈಜನಾಥ್ ಪಾಟೀಲ್ : ಸರ್ಕಾರದಿಂದ ಯಾವ ಹಣ ಬಿಡುಗಡೆ ಆಗಬೇಕೋ ಆ ಎಲ್ಲಾ ಹಣ ಬಿಡುಗಡೆ ಆಗಿದೆ. ಯಾವುದೂ ಉಳ್ಯೂ ಇಲ್ಲ. ಹೊಸ ಎಲೆಕ್ಟೆಡ್ ಮೆಂಬರ್ಸ್ ಬಂದಿದ್ದಾರೆ. ಟ್ಯಾಕ್ಸ್ ಕೂಡ ವಸೂಲ್ ಆಗಿದೆ. ಸರ್ಕಾರದಿಂದ ಯಾವುದು ಬಿಡುಗಡೆ ಮಾಡಬೇಕಾಗಿತ್ತು. ಅದೆಲ್ಲಾ ಬಿಡುಗಡೆ ಮಾಡಿದ್ದೇವೆ. ಒಂದು ಪೈಸೆ ಕೂಡ ಇಟ್ಟುಕೊಂಡಿಲ್ಲ.

ನಾಗರೀಕ ಹಕ್ಕು ಸಂರಕ್ಷಣಾ ಜಾರಿ ನಿರ್ದೇಶನಾಲಯದ ಕಛೇರಿ.

105 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆ.ಜಿ.ಎಫ್. ನಗರವು ಮೀಸಲು ಕ್ಷೇತ್ರವಾಗಿದ್ದು ಅಧಿಕ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರೇ ವಾಸಿಸುತ್ತಿರುವ ಈ ನಗರದಲ್ಲಿ ನಾಗರೀಕ ಹಕ್ಕು ಸಂರಕ್ಷಣಾ ಜಾರಿ ನಿರ್ದೇಶನಾಲಯದ ಒಂದು ಕಛೇರಿಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಆ) *ಬಂದಿದ್ದಲ್ಲಿ ಕಛೇರಿಯನ್ನು ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು. ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯವು ಬೆಂಗಳೂರು, ಮೈಸೂರು ಮಂಗಳೂರು, ಗುಲ್ಬರ್ಗಾ, ದಾವಣಗೆರೆ, ಮತ್ತು ಬೆಳಗಾಂನಲ್ಲಿ ಪ್ರಾದೇಶಿಕ ಘಟಕಗಳನ್ನು ಹೊಂದಿದೆ. ಬೆಂಗಳೂರು ಪ್ರಾದೇಶಿಕ ಘಟಕವು ಬೆಂಗಳೂರು, ಬೆಂಗಳೂರು ಗ್ರಾಮಾಂತರ ತುಮಕೂರು ಮತ್ತು ಕೋಲಾರ ಜಿಲ್ಲೆಗಳನ್ನು, ಮೈಸೂರು ಘಟಕವು ಮೈಸೂರು, ಮಂಡ್ಯ ,ಹಾಸನ ಮತ್ತು ಕೊಡಗು ಜಿಲ್ಲೆಗಳನ್ನು, ಮಂಗಳೂರು ಘಟಕವು ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು, ದಾವಣಗೆರೆ ಘಟಕವು ಚಿತ್ರದುರ್ಗ, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲೆಗಳನ್ನು, ಬೆಳಗಾಂ ಘಟಕವು, ಬೆಳಗಾಂ, ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳನ್ನು ಹಾಗೂ ಗುಲ್ಬರ್ಗಾ ಘಟಕವು ಗುಲ್ಬರ್ಗಾ, ರಾಯಚೂರು ಮತ್ತು ಬೀದರ್ ಜಿಲ್ಲೆಗಳನ್ನು ಒಳಗೊಂಡಿರುತ್ತದೆ.

ಇದಲ್ಲದೆ ಕೋಲಾರ, ತುಮಕೂರು, ಮಂಡ್ಯ ಬಿಜಾಪುರ, ರಾಯಚೂರು ಮತ್ತು ಬೀದರ್ ಜಿಲ್ಲೆಗಳ ಕೇಂದ್ರ ಸ್ಥಾನಗಳಲ್ಲಿ ಸಂಚಾರಿ ದಳಗಳನ್ನು ಮಂಜೂರು ಮಾಡಲಾಗಿದೆ.